1.) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ರಾಜ್ಯದಲ್ಲಿ 123 ತಾಲ್ಲೂಕುಗಳಲ್ಲಿ ಬರಗಾಲವಿರುವ ಬಗ್ಗೆ

ಶ್ರೀ ಹೆಚ್. ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ನಾವು ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ನೀಡಿದ್ದೇವೆ. ರಾಜ್ಯದಲ್ಲಿ 123 ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಭಾರಿ ತೊಂದರೆ ಇದೆ. ಒಂದು ಕಡೆ ಬರಗಾಲ ಇದೆ. ಇನ್ನೊಂದು ಕಡೆ ಅದರ ಕುರಿತು ಚರ್ಚೆ ನಡೆಯುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ನಿಯೋಗ ಹೋಗೋಣ, ಕೇಂದ್ರ ಸರ್ಕಾರಕ್ಕೆ ಮನವಿ ಮಾಡೋಣವೆಂದು ಹೇಳಿದ್ದಾರೆ. ಕುಡಿಯುವ ನೀರಿಗೆ ಇವತ್ತು 123 ತಾಲ್ಲೂಕಿನಲ್ಲಿ ಮಾತ್ರವಲ್ಲ ಎಲ್ಲಾ ಕಡೆಗಳಲ್ಲೂ ನೀರಿನ ಹಾಹಾಕಾರ ಇದೆ. ಅದಕ್ಕಾಗಿ ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ತಾವು ಅನುಮತಿ ಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು :– ನಿಯಮ 69 ರಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ.

2.) ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು :– ಡಾ: ಬಗಲಿ ಸಾರ್ವಭೌಮ ಸಾತಗೌಡ ರವರ ಪ್ರಶ್ನೆಗೆ ಸರ್ಕಾರ ಸಮಯಾವಕಾಶ ಕೋರಿದ್ದಾರೆ. 30ನೇ ತಾರೀಖಿಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– ಇದರಲ್ಲಿ Sales Tax ಮಾತ್ರ ಇದೆ. VAT ಇಲ್ಲ ಸಾರ್. ಅದನ್ನೆಲ್ಲಾ collect ಮಾಡಿ ಇನ್ನೆರಡು ದಿನಗಳಲ್ಲಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :– ಶ್ರೀ ಅಪ್ಪಾಜಿ ಶಂಕರರಾವ್ ನಾಡಗೌಡ ರವರು ಬಂದಿಲ್ಲ. ಶ್ರೀ ಕೃಷ್ಣಪ್ಪ ಎಂ.ಟಿ. ರವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ. 30ನೇ ತಾರೀಖಿಗೆ ಉತ್ತರ ಕೊಡಿಸುತ್ತೇನೆ. ಶ್ರೀ ಎ. ಮಂಜು ಅವರ ಪ್ರಶ್ನೆಗೆ ಸರ್ಕಾರ ಕಾಲಾವಕಾಶ ಕೇಳಿದ್ದಾರೆ. ಶ್ರೀ ರಾಮಚಂದ್ರ ಎಸ್.ವಿ. ರವರೇ ತಾವು ಪ್ರಶ್ನೆ ಕೇಳಿ.